





ವೈಭವವನ್ನು ಸಾರುತ್ತವೆ. ಅರಮನೆಗೆ ನೀರು ಪೂರೈಸುವದಕ್ಕೆ 5 ನೀರಿನ ತೊಟ್ಟಿಗಳಿದ್ದು ಕೆಳಗಿನಿಂದ ಅವುಗಳಿಗೆ ನೀರು ಸರಬರಾಜು ಮಾಡುವ ವ್ಯವಸ್ಥೆ ಇತ್ತು.

ಗೋಲ್ಕೊಂಡ ಅಂದೊಡನೆ ನೆನಪಾಗುವ ಇನ್ನೊಂದು ಸಂಗತಿ ಅಲ್ಲಿ ದೊರೆತ ಜಗತ್ಪ್ರಸಿದ್ಧ ವಜ್ರಗಳು. ಜಗತ್ತಿನ ಮೊಟ್ಟಮೊದಲ ವಜ್ರದ ಗಣಿ ಇದ್ದುದು ಗೊಲ್ಕೊಂಡದಲ್ಲಿ ಎಂದರೆ ಆಶ್ಚರ್ಯವಾಗದಿರದು. ಕೊಹ್–ಎ–ನೂರ್, ದರಿಯಾ–ಎ–ನೂರ್, ಹೋಪ್ ಡೈಮಂಡ್, ನೂರ್–ಉಲ್–ಇನ್, ಪ್ರಿನ್ಸೀ ಡೈಮಂಡ್, ರಿಜೆಂಟ್ ಡೈಮಂಡ್ ಮೊದಲಾದ ವಜ್ರಗಳ ತವರೂರು. 'ಕೊಹಿನೂರ್' ವಜ್ರ ಸುಲ್ತಾನ್ ಅಬ್ದುಲ್ಲಾ ಕುತುಬ್ ಷಾ ಆಡಳಿತಾವಧಿಯಲ್ಲಿ ಕೃಷ್ಣಾ ನದಿಯ ತಟದಲ್ಲಿ ಗೋಲ್ಕೊಂಡ ಹತ್ತಿರದ ಕೊಲ್ಲೋರ್ ಎಂಬಲ್ಲಿ ದೊರೆಯಿತು. 1656 ರಲ್ಲಿ 'ಕೊಹಿನೂರ್ ವಜ್ರ' ಮುಘಲ್ ದೊರೆ ಶಹಜಹಾನ್‌ನ ವಶವಾಯಿತು.1739ರಲ್ಲಿ ಮೊಹಮ್ಮದ್ ಷಾ ಅವಧಿಯಲ್ಲಿ ನಾದಿರ್ ಷಾನ ಪಾಲಾಗಿ ಇರಾನ್‌ಗೆ ಸ್ಥಳಾಂತರಗೊಂಡಿತಲ್ಲದೇ ಅಲ್ಲಿ ಪರಿಷ್ಕರಣೆಗೊಂಡು ಮತ್ತೆ ಪಂಜಾಬ್ ಸೇರಿತು. 1852 ರಲ್ಲಿ ಪಂಜಾಬ್‌ನ ದಿಲೀಪ್ ಸಿಂಗ್ ಈ ವಜ್ರವನ್ನು ಇಂಗ್ಲೆಂಡ್‌ನ ವಿಕ್ಟೋರಿಯ ಮಹಾರಾಣಿಯವರಿಗೆ ಸಮರ್ಪಿಸಿದನು. ಆವತ್ತಿನಿಂದ ಇವತ್ತಿನವರೆಗೂ ಇಂಗ್ಲೆಂಡ್‌ನ ರಾಜ ಕಿರೀಟದಲ್ಲಿ 360 ಕ್ಯಾರೆಟ್ ತೂಕದ 'ಕೊಹಿನೂರ್ ವಜ್ರ' ಮಿನುಗುತ್ತಿದೆ.185 ಕ್ಯಾರೆಟ್‌ನ 37 ಗ್ರಾಮ್ ತೂಕದ 'ದರಿಯಾ–ಎ–ನೂರ್' ವಜ್ರ ಈಗ ಇರಾನ್ ದೊರೆಯ ರಾಜಮುಕುಟದಲ್ಲಿ ಹೊಳೆಯುತ್ತಿದೆ.

ಹೈದರಾಬಾದ್‌ನಿಂದ ಕೇವಲ 11 ಕಿ.ಮಿ. ದೂರದಲ್ಲಿರುವ ಗೋಲ್ಕೊಂಡ ಕೋಟೆಗೆ ಬೆಳಿಗ್ಗೆ 9 ಗಂಟೆಯಿಂದ ಸಂಜೆ 6  ಗಂಯವರೆಗೆ ಪ್ರವೇಶಾವಕಾಶವಿದೆ. 10 ರೂ.ಗಳ ಪ್ರವೇಶ ಶುಲ್ಕ ವಿಧಿಸಲಾಗುತ್ತದೆ. 'ಬೆಳಕು ಮತ್ತು ಧ್ವನಿಯ ಆಟ' (**Light and Sound Show**) ಮೂಲಕ ಇಲ್ಲಿನ ಇತಿಹಾಸ ಪ್ರಸ್ತುತಪಡಿಸುವ ಕಾರ್ಯಕ್ರಮ ಅತ್ಯಾಕರ್ಷಕವಾಗಿದೆ. ಇಂಗ್ಲಿಷ್, ಹಿಂದಿ ಮತ್ತು ತೆಲುಗು ಭಾಷೆಗಳಲ್ಲಿ ಪ್ರತ್ಯೇಕ ಶೋ ನಡೆಸುತ್ತಾರೆ.